2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

| | |
|---|---|
| ಎಸ್ ಸಿಃ | 245 / 18 |

| | | |
|---|---|---|
| ಸಾಕ್ಷಿದಾರರ ಹೆಸರು | ಅನಿಲ್ ಕುಮಾರ್ | |
| ತಂದೆಯ ಹೆಸರು | ಮಹದೇವಯ್ಯಾ | ಸಾಕ್ಷಿಗೆ ದಿಃ 04.07.2019 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು. |
| ವಯಸ್ಸು | 36 ವರ್ಷ | |
| ಉದ್ಯೋಗ | ನರ್ಸ್ | ಪಿ ಡಬ್ಲ್ಯೂ - 03 |
| ವಾಸ ಸ್ಥಳ | ಅರವಿಂದನಗರ ಮೈಸೂರು | ಸಿ ಡಬ್ಲ್ಯೂ - 22 |

ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

ಕಳೆದ ಹತ್ತು ವರ್ಷಗಳಿಂದ ಈವರೆಗೂ ಮೈಸೂರಿನ ಅಪೋಲೋ ಬಿ.ಜಿ.ಎಸ್. ಆಸ್ಪತ್ರೆಯಲ್ಲಿ ಸ್ಟಾಫ್ ನರ್ಸ್ ಆಗಿ ಕೆಲಸ ಮಾಡುತ್ತೇನೆ. ಚಾಸಾ-23 ಮತ್ತು 21 ರವರು ಸದರಿ ಆಸ್ಪತ್ರೆಯಲ್ಲಿ ಆ್ಯಂಬುಲೇನ್ಸ ಚಾಲಕನಾಗಿ ಕೆಲಸ ಮಾಡುತ್ತಿದ್ದಾರೆ. ಚಾಸಾ-20 ರವರು ನಮ್ಮ ಆಸ್ಪತ್ರೆಯಲ್ಲಿ ಸ್ಟಾಫ್ ನರ್ಸ್ ಆಗಿ ಕೆಲಸ ಮಾಡುತ್ತಿದ್ದರು. ನಾನು ದಿಃ 24.05.2018 ರ ರಾತ್ರಿ 8.00 ಗಂಟೆಯಿಂದ ದಿಃ 25.05.2018 ರ ಬೆಳಿಗ್ಗೆ 8.00 ಗಂಟೆಯ ತನಕ ಕರ್ತವ್ಯದಲ್ಲಿ ಇದ್ದೆನು.

ದಿಃ 25.05.2018 ರ ಬೆಳಿಗ್ಗಿನ ಜಾವ 1.30 ಗಂಟೆ ಸಮಯಕ್ಕೆ ನಮ್ಮ ಆಸ್ಪತ್ರೆಗೆ ವಿಜಯನಗರದಿಂದ ಬಂದ ದೂರವಾಣಿ ಕರೆಯ ಮೇರೆಗೆ ಚಾಸಾ-20 ಮತ್ತು 21 ರವರು ಆ್ಯಂಬುಲೇನ್ಸ ನಲ್ಲಿ ಹೋಗಿದ್ದರು. ಅವರು ಅಲ್ಲಿಂದ ದೂರವಾಣಿ ಕರೆ ಮಾಡಿ ನಾವು ಒಬ್ಬ ವ್ಯಕ್ತಿಯನ್ನು ಕರೆದುಕೊಂಡು ಬರುತ್ತಿದ್ದು, ಸದರಿ ಮನೆಯ ಮಹಡಿಯಲ್ಲಿ ಇನ್ನೊಂಬ ವ್ಯಕ್ತಿಯನ್ನು ಆಸ್ಪತ್ರೆಗೆ ತರಲು ಆ್ಯಂಬುಲೇನ್ಸ ಬೇಕು ಎಂದು ತಿಳಿಸಿದ ಮೇರೆಗೆ ನಾನು ಹಾಗೂ ಚಾಸಾ-23 ರವರು ಅವರು ಹೇಳಿದ ವಿಳಾಸಕ್ಕೆ ಹೋದೆವು, ನಾವು ಹಾಗೇ ವಿಜಯನಗರ 4 ನೇ ಹಂತದಲ್ಲಿರುವ ಒಂದು ಮನೆಗೆ ಹೋಗಿರುತ್ತೇವೆ. ಅಲ್ಲಿ ಮನೆಯ ಬಳಿ ಒಬ್ಬ ವ್ಯಕ್ತಿಯು ಮನೆಯ ಬಳಿ ಕರೆದುಕೊಂಡು ಹೋದರು.

ಮನೆಯ ಒಳಗಡೆ ಟೀಪಾಯಿಯ ಬಳಿ ರಕ್ತವು ಚೆಲ್ಲಿತು ಮತ್ತು ಅಲ್ಲಿ ಸಿಗರೇಟ್ ಪ್ಯಾಕ್, ಮಧ್ಯದ

ಬಾಂಟಲ್ ಹಾಗೂ ಚಿಕನ್ ಬೀರಿಯಾನಿ ಮತ್ತು ತುಂಡುಗಳು ಇದ್ದವು. ನಮ್ಮನ್ನು ಸದರಿ ವ್ಯಕ್ತಿಯು ಮನೆಯ 1 ನೇ ಮಹಡಿಯ ರೊಮಿಗೆ ಕರೆದುಕೊಂಡು ಹೋದರು. ಅದು ಬಲಭಾಗದ ಕೋಣೆಯಲ್ಲಿ ಮಂಚದ ಮೇಲೆ ಒಬ್ಬ ಹೆಂಗಸು ಮಲಗಿದ್ದಳು. ಅವರ ನಾಡಿಯನ್ನು ಪರಿಶೀಲಿಸಲಾಗಿ ಯಾವುದೇ ನಾಡಿಮಿಡಿತ ಕಂಡು ಬಂದಿರುವುದಿಲ್ಲ, ಕತ್ತಿನ ಬಳಿ ಪರಿಶೀಲಿಸಲಾಗಿ ಕೊಯ್ದು  ಆಳವಾದ ಗಾಯ ಕಂಡುಬಂದು ಮತ್ತು ಸದರಿ ವ್ಯಕ್ತಿಯು ಮೃತಪಟ್ಟಿದ್ದಾರೆ ಎಂದು ತಿಳಿದು ಬಂದಿತ್ತು. ಸದರಿ ವ್ಯಕ್ತಿಯು ದೇಹವನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋಗುವಂತೆ ಕೋರಿಕೊಂಡರು ನಾನು ಮೃತದೇಹವನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋಗುವುದಿಲ್ಲ, ಎಂದು ತಿಳಿಸಿರುತ್ತೇನೆ.

ಇನ್ನೊಂದು ಕೋಣೆಯಲ್ಲಿ ನೋಡಿದಾಗ ಬೇಡ್ ಶೀಟ್ ನಲ್ಲಿ ಸುತ್ತಿದ ದೇಹ ಇತ್ತು, ಇದನ್ನು ತೆರೆದು ನೋಡಿದಾಗ ಸಂಪೂರ್ಣ ರಕ್ತಸ್ಥಿಕವಾಗಿ ವಿಕಾರವಾಗಿ ಇತ್ತು, ಜೊತೆಯಲ್ಲಿ ಇದ್ದ ವ್ಯಕ್ತಿಯ ಸದರಿ  ದೇಹ ಮೃತಪಟ್ಟ ಹೆಂಗಸಿನ ಮಗಳ ಮೃತದೇಹವೆಂದು ಹೇಳಿದ, ಸದರಿ ವ್ಯಕ್ತಿಯು ತನ್ನಗೆ ಹಾಗೂ ಮೃತಪಟ್ಟವರಿಗೆ ಮತ್ತು ಆಸ್ಪತ್ರೆಗೆ ಕರೆದುಕೊಂಡು ಹೋದವರಿಗೆ ಮತ್ತು ಮೃತಪಟ್ಟವರಿಗೆ ಏನು ಸಂಬಂಧ ವೆಂದು ನನಗೆ ತಿಳಿಸಿರುವುದಿಲ್ಲ. ಹಾಗೆಯು ಸದರಿ ವ್ಯಕ್ತಿಗಳು ಹೇಗೆ ಮೃತಪಟ್ಟರು ಎಂದು ನನಗೆ ತಿಳಿಸಿರುವುದಿಲ್ಲ. ನಾನು ಮೇಲೆ ಹೇಳಿದ ವಿಚಾರ ಹೊರತುಪಡಿಸಿ ಬೇರೆ ಯಾವುದೇ ವಿಚಾರವನ್ನು ಪೋಲಿಸರಿಗೆ ಹೇಳಿರುವುದಿಲ್ಲ. ಪೋಲಿಸರು ವಿಚಾರಣೆಗೆ ಬಂದಾಗ ನಮ್ಮನ್ನು ಮನೆಯ ಒಳಗಡೆ ಕರೆದುಕೊಂಡು ಹೋದ ವ್ಯಕ್ತಿ ಮತ್ತು ಚಾಸಾ-20 ರವರು ಆಸ್ಪತ್ರೆಗೆ ಕರೆದುಕೊಂಡು ಹೋಗಿರುವ ಗಾಯಾಳು ತಂದೆ ಮಗ ಎಂದು ಗೊತ್ತಾಯಿತು.

ಸದರಿ ಗಾಯಾಳುವಿಗೆ ಹೇಗೆ ಗಾಯಗಳು ಆದವು ಎಂಬ ವಿಷಯ ಮತ್ತು ಮನೆಯಲ್ಲಿ ಆದ 2 ಸಾವಿನ ಹಿನ್ನೆಲೆ ಏನು ಎಂದು ನನಗೆ ಗೊತ್ತಿಲ್ಲ, ಮೃತದೇಹವನ್ನು ತೋರಿಸಿದಾಗ ಈ ವಿಷಯಗಳನ್ನು ನನಗೆ ಮೃತದೇಹವನ್ನು ತೋರಿಸಿದ ವ್ಯಕ್ತಿ ತಿಳಿಸಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಪಿ ಪಿ ರವರು ಸಾಕ್ಷಿಯನ್ನು ಭಾಗಶಹ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ವಿನಂತಿಸಿರುತ್ತಾರೆ. ಈ ಸಾಕ್ಷಿಯು ತನಿಖಾಧಿಕಾರಿಯ ಮುಂದೆ ನೀಡಿದ್ದಾರೆ ಎಂದು ಹೇಳಲಾದ ಹೇಳಿಕೆಯನ್ನು ಗಮನಿಸಿ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿ ನೀಡಲಾಯಿತು.)

<u>ಪಾಟೀ ಸವಾಲು  ಮಾನ್ಯ ಪಿ ಪಿ ರವರಿಂದಃ-</u>

ನನನ್ನು ಮನೆಯ ಒಳಗಡೆ ಮತ್ತು ಮಹಡಿಗೆ ಕರೆದುಕೊಂಡು ಹೊದ ವ್ಯಕ್ತಿ ರಾಮಚಂದ್ರ ಎಂದು ನನಗೆ ತಿಳಿದಿರುತ್ತದೆ ಮತ್ತು ಅವರು  ತನ್ನ ಮಗನು ಆತನ ಹೆಂಡತಿ ಮತ್ತು ಮಗಳನ್ನು ಸಾಯಿಸಿದ್ದಾನೆ ಎಂದು ನಾನು

ಅವರನ್ನು ವಿಚಾರಿಸಿದಾಗ ನನಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ನಾನು ಆಸ್ಪತ್ರೆಗೆ ಬಂದು ವಿಚಾರ ಮಾಡಿದಾಗ ಪ್ರಜ್ವಲ್ ಎಂಬುವವನ್ನು ಒಳರೋಗಿಯಾಗಿ ದಾಖಲಾಗಿದು ಆತನ್ನು ತನ್ನ ಹೆಂಡತಿ ಮತ್ತು ಮಗಳನ್ನು ಕೊಲೆ ಮಾಡಿ ಕತ್ತು ಮತ್ತು ಕೈ ಕೊಯ್ದು ಕೊಡು ಈತನ್ನು ಆತ್ಮಹತ್ಯೆಗೆ ಪ್ರಯತ್ನಿಸಿರುತ್ತಾನೆ. ಎಂಬ ವಿಚಾರ ತಿಳಿಯಿತು ಎಂದರೆ ಸರಿಯಲ್ಲ. ಪ್ರಜ್ವಲ್ ಇತನ್ನು ನಮ್ಮ ಆಸ್ಪತ್ರೆಗೆ ಒಳರೋಗಿಯಾಗಿ ದಾಖಲಾಗಿದ್ದನು, ಎಂದರೆ ಸರಿ.

ನಾನು ಈಗ ನನಗೆ ಓದಿ ಹೇಳಿದಂತೆ ಅಂದರೆ " ನಂತರ ಸದರಿ ಆಸಾಮಿ –--------ವಿಚಾರ ತಿಳಿಯಿತು " ಎಂದು ನಿಪಿ-5 ರಂತೆ ಹೇಳಿಕೆಯನ್ನು ಕೊಟ್ಟಿದೇನೆ ಎಂದರೆ ಸರಿಯಲ್ಲ. ನಾನು ನಿಪಿ-5 ರಂತೆ ಹೇಳಿಕೆಯನ್ನು ಕೊಟ್ಟದ್ದರು ಸಹ ಈಗ ನಾನು ಹೇಳಿಕೆಯನ್ನು ಕೊಟ್ಟಿಲ್ಲ ಎಂದು ಆರೋಪಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ- ಆರೋಪಿಗಳ ಪರ ಶ್ರೀ ವಿ.ಬಿ.ಎನ್. ವಕೀಲರಿಂದ -

ನಾನು ಸ್ಥಳದಿಂದ ಆಸ್ಪತ್ರೆಗೆ ಬಂದಾಗ ಆಗಲೆ ಪ್ರಜ್ವಲ್ ಈತನನ್ನು ಒಳರೋಗಿಯಾಗಿ ದಾಖಲು ಮಾಡಲಾಗಿತ್ತು ಎಂದರೆ ಸರಿ. ನಾನು ಆಸ್ಪತ್ರೆಗೆ ಹಿಂತಿರುಗಿ ಬಂದ ನಂತರ ಪೋಲಿಸಲು ಆಸ್ಪತ್ರೆಗೆ ಬಂದಿದ್ದರು. ಪೋಲಿಸರಿಗೆ ನಾನು ಮೇಲೆ ಹೇಳಿದಂತೆ ಮನೆಗೆ ಹೋಗಿ ಮೃತದೇಹಗಳನ್ನು ನೋಡಿದ ವಿಷಯಗಳನ್ನು ಮಾತ್ರ ತಿಳಿಸಿದ್ದು ಬೇರೆ ಏನನ್ನು ತಿಳಿಸಿಲ್ಲ ನಾನು ಹೇಳುವಂತೆ ಮನೆಯಲ್ಲಿ ಮಧ್ಯದ ಬಾಟಲು, ಸಿಗರೇಟ ಪ್ಯಾಕ್ ಮತ್ತು ಬಿರಿಯಾನಿ ಇರಲಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲ

(ನನ್ನ ಉಕ್ತಲೇಖನಕ್ಕೆತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮತ್ತು ಎಮ್.ಎ.ಸಿ.ಟಿ.ಮೈಸೂರು